<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

# O.S. No.333/2018.DW1.

ದಿನಾಂಕಃ**29.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ವಾದಿಯರ ಪರ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ-

ನನ್ನ ತಂದೆಯ ಹೆಸರು ರೇವಣ್ಣ. ನನ್ನ ತಂದೆಗೆ ಒಟ್ಟು 2 ಜನ ಮಕ್ಕಳು ಅವರುಗಳೆಂದರೆ, ಪ್ರಕಾಶ್, ವಸಂತಮ್ಮ. ನನ್ನ ತಾಯಿ ಹೇಮಾವತಿ ಈಗ ಜೀವಂತವಿಲ್ಲ, ಅವರು ಏಪ್ರೀಲ್ 2025 ರಂದು ಮೃತಪಟ್ಟಿರುತ್ತಾರೆ. ವಸಂತಮ್ಮ ರವರು ಯಾವ ಯಾವ ಸ್ವತ್ತಿಗೆ ಸಂಬಂಧಪಟ್ಟಂತೆ ದಾವೆ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಹಿರೇನಲ್ಲೂರು ಗ್ರಾಮದ ಸರ್ವೆ ನಂ.21, 116, 34 ಕ್ಕೆ ಸಂಬಂಧಪಟ್ಟಂತೆ ದಾವೆ ಹಾಕಿದ್ದಾರೆ.

ಸರ್ವೆ ನಂ.21 ರ ಸ್ವತ್ತು ಕೇದಿಗೆರೆ ಗ್ರಾಮಕ್ಕೆ ಸೇರಿದ್ದು ಹಾಗೂ ಅದರ ಖಾತೆ ನನ್ನ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 1 ನೇ ದಾವಾ ಅನುಸೂಚಿ ಸ್ವತ್ತು ನನ್ನ ತಂದೆಯಿಂದ ನಮಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ.

2 ನೇ ದಾವಾ ಅನುಸೂಚಿ ಸ್ವತ್ತು ಗಿರಿಯಾಪುರ ಗ್ರಾಮಕ್ಕೆ ಸೇರಿದ್ದು, ಅದರ ಖಾತೆ ನನ್ನ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 2 ನೇ ದಾವಾ ಅನುಸೂಚಿ ಸ್ವತ್ತು ನನ್ನ ತಂದೆಯಿಂದ ನಮಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ.

3 ನೇ ದಾವಾ ಅನುಸೂಚಿ ಸ್ವತ್ತು ಗಿರಿಯಾಪುರ ಗ್ರಾಮಕ್ಕೆ ಸೇರಿದ್ದು, ಅದರ ಖಾತೆ ನನ್ನ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 3 ನೇ ದಾವಾ ಅನುಸೂಚಿ ಸ್ವತ್ತು ನನ್ನ ತಂದೆಯಿಂದ ನಮಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ.

1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು ವಾದಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದರೆ ಸರಿ. ವಾದಿಯು ಯಾವ ವರ್ಷದಲ್ಲಿ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. ವಾದಿಯ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ನಾನೇ ಮಾಡಿರುತ್ತೇನೆ. ವಾದಿಯ ಮದುವೆಗೆ ಎಷ್ಟು ಖರ್ಚು ಆಯಿತು ಎಂದು ನನಗೆ ಗೊತ್ತಿಲ್ಲ

ಎಂದರೆ ಸಾಕ್ಷಿಯು 1 ½ ಎಕರೆ ಜಮೀನು ಮಾರಾಟ ಮಾಡಿ ¼ ಕೆ ಜಿ ಬಂಗಾರ ರೂ.5 ಲಕ್ಷ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ಸರ್ವೆ ನಂಬರಿನ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದು ಈಗ ನನಗೆ ಹೇಳಲಾಗುವುದಿಲ್ಲ.

ದಾವಾ ಸ್ವತ್ತುಗಳು ನನ್ನ ಸ್ವಂತ ಆಸ್ತಿಗಳಾಗಿದ್ದು ಪಹಣಿಯಲ್ಲಿ ಪಿತ್ರಾರ್ಜಿತ ಎಂದು ತಪ್ಪಾಗಿ ನಮೂದಾಗಿದೆ ಎಂದು ಎ ಸಿ ಅಥವಾ ಡಿಸಿ ರವರಿಗೆ ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಿಲ್ಲ. ದಾವಾ ಸ್ವತ್ತುಗಳು ನನ್ನ ಸ್ವಂತ ಆಸ್ತಿ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ದಾವಾ ಸ್ವತ್ತುಗಳು ನನ್ನ ಮತ್ತು ವಾದಿಯ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ಎಲ್ಲಾ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾದ ಕಾರಣ ವಾದಿಗೂ ಸಹಃ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರು ಸಹಃ ನಾನು ವಾದಿಗೆ ಹಿಸ್ಸೆ ನೀಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.